# ಕೃಷಿ ಪಾತ್ರ ಪ್ರೀತಿ

**ಹೀರೊ–ಹೀರೋಯಿನ್ ಎನ್ನುವುದಕ್ಕಿಂತ ಪಾತ್ರವೊಂದು ಸಿನಿಮಾಗೆ ನೀಡುವ ಕೊಡುಗೆಯೇ ಬಹುಮುಖ್ಯ ಸಂಗತಿ ಎನ್ನುವುದು ನಟಿ ಕೃಷಿ ತಾಪಂಡ ಅಭಿಮತ. ‘ಗಣ’ ಸಿನಿಮಾದಲ್ಲಿನ ತಮ್ಮ ಪಾತ್ರ ಕೂಡ ಅಂಥದ್ದೇ ಧಾಟಿಯದ್ದು ಎನ್ನುತ್ತಾರೆ.**

‘ಅಕಿರ’ ಚಿತ್ರದ ಮೂಲಕ ಕನ್ನಡ ಸಿನಿಮಾರಂಗಕ್ಕೆ ಕಾಲಿಟ್ಟ ಕೊಡಗಿನ ಬೆಡಗಿ ಕೃಷಿ ತಾಪಂಡ, ನಟಿಸಿದ್ದು ಏಳೆಂಟು ಸಿನಿಮಾಗಳಾದರೂ ತಮ್ಮನ್ನು ತಾವು ನಿರೂಪಿಸಿಕೊಳ್ಳುವ ಸಣ್ಣ ಅವಕಾಶವನ್ನೂ ಸಮರ್ಥವಾಗಿಯೇ ಬಳಸಿಕೊಂಡವರು.

ಇದೀಗ ಅದೇ ಹುರುಪಿನೊಂದಿಗೆ, ನಟ ಪ್ರಜ್ವಲ್ ದೇವರಾಜ್ ಅಭಿನಯದ ‘ಗಣ’ ಸಿನಿಮಾಗೆ ಬಣ್ಣ ಹಚ್ಚಿದ್ದಾರೆ. ಇದೇ ಸಂದರ್ಭ, ತಮ್ಮ ಪಾತ್ರ, ಬದಲಾಗುತ್ತಿರುವ ಸಿನಿಮಾರಂಗದ ಆಯಾಮಗಳ ಬಗ್ಗೆ ಮಾತನಾಡಿದ್ದಾರೆ.

‘ಗಣ’ ಸಿನಿಮಾದಲ್ಲಿನ ತಮ್ಮ ಪಾತ್ರವನ್ನು ಒಪ್ಪಿಕೊಳ್ಳುವ ಮುನ್ನ ಸಾಕಷ್ಟು ಬಾರಿ ಯೋಚಿಸಿದ್ದರಂತೆ ಕೃಷಿ. ‘ಇದು ಅತಿ ಕಷ್ಟಕರ ನಿರ್ಧಾರವಾಗಿತ್ತು. ಮುಖ್ಯ ಪಾತ್ರಕ್ಕೆ ವಿರುದ್ಧವಾಗಿ ಕಾಣಿಸಿಕೊಳ್ಳುವುದು ನೋಡುಗರ ದೃಷ್ಟಿಯಲ್ಲಿ ನಮ್ಮ ಆನ್‌ಸ್ಕ್ರೀನ್ ಇಮೇಜ್ ಅನ್ನೇ ಬದಲಾಯಿಸಿಬಿಡುವ ಸಾಧ್ಯತೆ ಇರುತ್ತದೆ. ಮೊದಮೊದಲು ಈ ಪಾತ್ರದ ಬಗ್ಗೆ ಗೊಂದಲದಲ್ಲೇ ಇದ್ದೆ. ಆಮೇಲೆ ಸ್ಪಷ್ಟ ನಿರ್ಧಾರಕ್ಕೆ ಬಂದೆ. ಸಿನಿಮಾರಂಗ ಈಗ ಬದಲಾಗುತ್ತಿದೆ, ಪಾತ್ರಗಳು ಪ್ರಮುಖವಾಗುತ್ತಿವೆ’ ಎಂದು ಹೇಳಿದ್ದಾರೆ.

ಹೀರೊ ಹೀರೋಯಿನ್ ಎನ್ನುವುದಕ್ಕಿಂತ ಕಥೆ ಹಾಗೂ ಕಥೆಯ ಮೇಲೆ ಪಾತ್ರದ ಪ್ರಭಾವವೇ ಮುಖ್ಯ ಎನ್ನುವುದು ಅವರ ವಿವರಣೆ. ಹೀಗಾಗಿ ತಾವು ಕೂಡ ಕಥೆಗೆ ಹಾಗೂ ತಾವು ನಿರ್ವಹಿಸಬೇಕಾದ ಪಾತ್ರಕ್ಕೆ ಸಾಕಷ್ಟು ಪ್ರಾಮುಖ್ಯ ನೀಡುವುದಾಗಿ ಹೇಳುತ್ತಾರೆ.

ದಕ್ಷಿಣ ಭಾರತದ ಸಿನಿಮಾ ರಂಗದಲ್ಲಿ ಮಹತ್ವದ ಬದಲಾವಣೆಗಳಾಗಿವೆ ಎನ್ನುತ್ತಾರೆ ಕೃಷಿ. ‘ಇಡೀ ಭಾರತೀಯ ಸಿನಿಮಾ ಕ್ಷೇತ್ರ ಒಟ್ಟಾಗುತ್ತಿದೆ. ಬಾಲಿವುಡ್ ನಟ ನಟಿಯರು ದಕ್ಷಿಣದ ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ದಕ್ಷಿಣ ಭಾರತದ ಕಲಾವಿದರು ರಾಷ್ಟ್ರೀಯ ಮಟ್ಟದ ಸಿನಿಮಾರಂಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಇದು ಮಹತ್ತರ ಬದಲಾವಣೆ. ನಿರ್ದೇಶಕರಿಗೆ, ತಂತ್ರಜ್ಞರಿಗೆ, ಕಲಾವಿದರಿಗೆ ಇದರಿಂದ ಅವಕಾಶ ಸೃಷ್ಟಿಯಾಗುತ್ತಿದೆ. ಪ್ರತಿಭಾವಂತರಿಗೆ ಮನ್ನಣೆ ಸಿಗುತ್ತಿದೆ’ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಎಕ್ಸ್‌ಪೋಷರ್ ಹೆಚ್ಚಾದಂತೆ ದಕ್ಷಿಣ ಭಾರತದ ಸಿನಿಮಾ ಕಥೆಗಳು, ಅವುಗಳ ಸ್ವರೂಪ ಬದಲಾಗುತ್ತಿದೆ ಎಂಬುದು ಅವರ ಅನಿಸಿಕೆ. ‘ಒಟಿಟಿ ಮುನ್ನೆಲೆಗೆ ಬಂದಾಗಿನಿಂದ ಸಿನಿಮಾ ಕಂಟೆಂಟ್ ಹಿಂದೆಂದೂ ಕಂಡಿರದ ರೀತಿಯಲ್ಲಿ ಆದ್ಯತೆ ಪಡೆಯಿತು. ಹಿಂದೆ, ಒಬ್ಬ ನಟ ಅಥವಾ ಸೂಪರ್ ಸ್ಟಾರ್‌ನನ್ನು ಮನಸಲ್ಲಿಟ್ಟುಕೊಂಡು ಕಥೆ ಬರೆಯುತ್ತಿದ್ದರು. ಈಗ ಕಥೆ ಬರೆದು ಅದಕ್ಕೆ ತಕ್ಕ ನಟರನ್ನು ಹುಡುಕುತ್ತಾರೆ’ ಎಂದು ಈಚಿನ ವರ್ಷಗಳಲ್ಲಿ ತಾವು ಕಂಡ ಬದಲಾವಣೆಗಳ ಕುರಿತು ವಿವರಿಸುತ್ತಾರೆ.

ಪ್ರಜ್ವಲ್ ದೇವರಾಜ್ ಅಭಿನಯದ ‘ಗಣ’ ಸಿನಿಮಾ, ಹಲವು ಪ್ರತಿಭಾನ್ವಿತ ನಟ ನಟಿಯರನ್ನು ಒಳಗೊಂಡಿರುವ ಕಾರಣಕ್ಕೆ ನಿರೀಕ್ಷೆ ಹುಟ್ಟಿಸಿದೆ. ಈಚೆಗೆ ಈ ಸಿನಿಮಾದ ಫಸ್ಟ್ ಲುಕ್ ಪೋಸ್ಟರ್ ಕೂಡ ಬಿಡುಗಡೆಯಾಗಿದೆ. ■

